1) ಕಲ್ಮಲ–ಶಿಗ್ಗಾಂ ರಾಜ್ಯ ಹೆದ್ದಾರಿ– 24 9 ಕಿಮೀ

2) ಅರಬಾವಿ–ಚಳ್ಳಕೆರೆ ರಾಜ್ಯ ಹೆದ್ದಾರಿ-- 37 6 ಕಿಮೀ

ಅ) ಮುಂಡರಗಿ ಮತದಾರ ಕ್ಷೇತ್ರದಲ್ಲಿ ಮಂಜೂರಾದ ಸೇತುವೆಗಳ ಯಾವ ಯಾವ ಕೆಲಸ ಪ್ರಾರಂಭವಾಗಿದೆ ಹಾಗೂ ಪ್ರಾರಂಭವಾಗದಿರುವ ಕೆಲಸಗಳಾವುವು,

ಮೇಲಿನ ಎರಡು ಹಂತದ ಸೇತುವೆಯ ನಿರ್ಮಾಣ ಕಾಮಗಾರಿಗಳಲ್ಲಿ ಮುಂಡರಗಿ–ಹೆಮ್ಮಿಗಿ ರಸ್ತೆಯ 2 80 ರಲ್ಲಿನ ಸೇತುವೆಯ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಅಪ್ರೋಚ್ ರಸ್ತೆ ರಕ್ಷಣಾ ಕಾಮಗಾರಿಗಳು ಪ್ರಗತಿಯಲ್ಲಿವೆ ಉಳಿದ ಮೂರು ಸೇತುವೆಯ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು

ಇ) ಪ್ರಾರಂಭವಾಗದಿರಲು ಕಾರಣಗಳೇನು,

ಈ ಸೇತುವೆಯ ನಕ್ಷೆ, ವಿನ್ಯಾಸ ತಯಾರಿಕೆಯ ಕಾರ್ಯಗಳು ಪ್ರಗತಿಯಲ್ಲಿವೆ ಸದರಿ ಕಾರ್ಯ ಪೂರ್ಣಗೊಂಡ ಕೂಡಲೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು

ಈ) ಈ ವರ್ಷ ಯಾವ ಯಾವ ಹೊಸ ಕೆಲಸಗಳಿಗಾಗಿ ಯೋಜನೆ ತಯಾರಿಸಲಾಗಿದೆ, (ವಿವರ ನೀಡುವುದು)?

ಯಾವುದು ಇರುವುದಿಲ್ಲ

ಕರ್ನಾಟಕ ವಿಧಾನ ಸಭೆ

12ನೇ ವಿಧಾನಸಭೆ 5ನೇ ಅಧಿವೇಶನ

ಚುಕ್ಕ ಗುರುತಿನ ಪ್ರಶ್ನೆ ಸಂಖ್ಯೆ	**1552**
ಸದಸ್ಯರ ಹೆಸರು	**ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)**
ಉತ್ತರಿಸುವ ದಿನಾಂಕ	**20–03–2007**
ಉತ್ತರಿಸುವ ಸಚಿವರು	**ಲೋಕೋಪಯೋಗಿ ಹಾಗೂ ಇಂಧನ ಸಚಿವರು**

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ 2007–08ನೇ ಸಾಲಿನಲ್ಲಿ ನಬಾರ್ಡ್, ಸಿಆರ್ಎಫ್ ಮುಂತಾದ ಯೋಜನೆಗಳ ಮೂಲಕ ಕೈಗೊಳ್ಳಲಿರುವ ರಸ್ತೆ ಹಾಗೂ ಸೇತುವೆ ಕಾಮಗಾರಿಗಳು ಯಾವುವು?

ನಬಾರ್ಡ್ ಯೋಜನೆಯಡಿ 2007–08ನೇ ಸಾಲಿನಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳ ಬಗ್ಗೆ ಇನ್ನೂ ನಿರ್ಧಾರ ಕೈಗೂಂಡಿರುವುದಿಲ್ಲ, ಸಿ ಆರ್ ಎಫ್ ಯೋಜನೆ ಅಡಿಯಲ್ಲಿಯೂ ಕೇಂದ್ರ ಸರ್ಕಾರದಿಂದ ಈ ಬಗ್ಗೆ ಇನ್ನೂ ಅನುದಾನ ನಿಗದಿಪಡಿಸಿರುವುದಿಲ್ಲ ಇದಲ್ಲದೆ ಬೇರೆ ಯೋಜನೆಗಳಡಿಯಲ್ಲಿಯೂ 2007–08ನೇ ಸಾಲಿನಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳ ಬಗ್ಗೆ ಇನ್ನೂ ನಿರ್ಧರಿಸಿರುವುದಿಲ್ಲ

ಆ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಅಪೂರ್ಣಗೊಂಡಿರುವ ಸೇತುವೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರದ ಕ್ರಮಗಳೇನು?

ಬೆಳ್ತಂಗಡಿ ತಾಲ್ಲೂಕಿನಲ್ಲಿ ನಬಾರ್ಡ್‌ನ ಆರ್ ಐ ಡಿ ಎಫ್–10ರ ಯೋಜನೆಯಡಿ ಪೆರ್ಮುಡೆ– ವೇಣೂರು ರಸ್ತೆಯ ಪೆರ್ಮುಡೆ ಬಳಿ 70 00 ಲಕ್ಷ ರೂ ಮೊತ್ತದಲ್ಲಿ ಕೈಗೊಳ್ಳಲಾಗಿರುವ ಸೇತುವೆ ಕಾಮಗಾರಿಯು ಪ್ರಗತಿಯಲ್ಲಿದೆ ಈ ಕಾಮಗಾರಿಯನ್ನು ಮೇ–2007ರ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು

ಅನುಬಂಧ–I

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**073(1500)**
ಸದಸ್ಯರ ಹೆಸರು	**ಶ್ರೀ ಅಂಗಾರ ಎಸ್ (ಸುಳ್ಯ)**
ಉತ್ತರಿಸುವ ಸಚಿವರು	**ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಗ್ರಾಮಾಂತರ ಪ್ರದೇಶಗಳಾದ ಗುತ್ತಿಗಾರು, ಸಂಪಾಜೆ, ಸುಬ್ರಹ್ಮಣ್ಯ ಮತ್ತು ಸವಣೂರು ಗ್ರಾಮಗಳಿಗೆ ಸರಿಯಾದ ವಿದ್ಯುತ್ ಸಂಪರ್ಕ ಒದಗಿಸಲು 33 ಕೆ ವಿ ಸಬ್–ಸ್ಟೇಷನ್‌ನ್ನು ಹಾಗೂ ಪುತ್ತೂರಿನಿಂದ ಸುಳ್ಯಕ್ಕೆ 110 ಕೆ ವಿ ಸಬ್–ಸ್ಟೇಷನ್ ಮತ್ತು ಲೈನನ್ನು ಮಂಜೂರು ಮಾಡುವ ಪ್ರಸ್ತಾವನೆ ಅಥವಾ ಉದ್ದೇಶ ಸರ್ಕಾರದ ಮುಂದಿದೆಯೇ,

ಇದೆ

ಆ) ಇದ್ದಲ್ಲಿ, ಯಾವಾಗ ಮಾಡಲಾಗುವುದು,

ಸವಣೂರು ಗ್ರಾಮದಲ್ಲಿ ಉದ್ದೇಶಿಸಲಾಗಿರುವ 33/11 ಕೆ ವಿ ವಿದ್ಯುತ್ ವಿತರಣಾ ಕೇಂದ್ರಕ್ಕೆ ಮಾತ್ರ ಈಗ ಭೂಮಿ ಲಭ್ಯವಾಗಿರುತ್ತದೆ ಗುತ್ತಿಗಾರು, ಸಂಪಾಜೆ ಮತ್ತು ಸುಬ್ರಹ್ಮಣ್ಯಗಳಲ್ಲಿ ಉದ್ದೇಶಿಸಲಾಗಿರುವ 33/11 ಕೆ ವಿ ವಿದ್ಯುತ್ ವಿತರಣಾ ಕೇಂದ್ರಗಳಿಗೆ ಭೂಮಿಯು ಲಭ್ಯವಾಗಬೇಕಾಗಿರುತ್ತದೆ ಅಲ್ಲದೇ, ಈ ನಾಲ್ಕೂ ಉದ್ದೇಶಿತ 33/11 ಕೆ ವಿ ವಿದ್ಯುತ್ ವಿತರಣಾ ಕೇಂದ್ರಗಳಿಗೆ ಸುಳ್ಯದಲ್ಲಿ ಉದ್ದೇಶಿಸಲಾಗಿರುವ 110 ಕೆ ವಿ ವಿದ್ಯುತ್ ಉಪ ಕೇಂದ್ರದಿಂದಲೇ ವಿದ್ಯುತ್ ಸರಬರಾಜಾಗಬೇಕಾಗಿರುತ್ತದೆ ನೆಟ್ಲಮಡ್ನೂರಿನಿಂದ ಸುಳ್ಯಕ್ಕೆ 110 ಕೆ ವಿ ಲೈನಿನ ನಿರ್ಮಾಣಕ್ಕೆ ಬೇಕಾದ 20 5 ಹೆಕ್ಟೇರ್ ರಕ್ಷಿತಾರಣ್ಯ ಬಿಡುಗಡೆಗೊಳಿಸಬೇಕಾಗಿದ್ದು, ಈ ಬಗ್ಗೆ ಎರಡು ಹಂತಗಳಲ್ಲಿ ಅಂದರೆ ನೆಟ್ಲಮಡ್ನೂರಿನಿಂದ ಮಾಡವು ಹಾಗೂ ಮಾಡವುನಿಂದ ಸುಳ್ಯದವರೆಗಿನ ಅರಣ್ಯ ಪ್ರದೇಶಗಳಲ್ಲಿ 110 ಕೆ ವಿ ಲೈನಿನ ನಿರ್ಮಾಣಕ್ಕೆ ಅರಣ್ಯ ಇಲಾಖೆಯ ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ